ದಿನಾಂಕ 26.06.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ ಶ್ರೀ. ಎಂ.ಆರ್ ವಕೀಲರಿಂದಃ

ಈ ಪ್ರಕರಣ ಅಲ್ಲದೆ ಎಂ.ಸಿ ಸಂಃ 64/2024 ನ್ನು ನನ್ನ ಗಂಡನ ವಿರುದ್ಧ ದಾಖಲಿಸಿದ್ದೇನೆ ಎಂದರೆ ಸರಿ. ನನ್ನ ಗಂಡ ಹಾಗೂ ಅತ್ತೆಯ ಮೇಲೆ ಸಿ.ಸಿ ಸಂಃ 588/2023 ರಂತೆ ಕ್ರಿಮಿನಲ್ ಪ್ರಕರಣವನ್ನು ಇದೇ ನ್ಯಾಯಾಲಯದಲ್ಲಿ ದಾಖಲಿಸಿದ್ದೇನೆ ಎಂದರೆ ಸರಿ. ಸಿ.ಸಿ ಸಂಃ 588/2023 ರ ಪ್ರಕರಣದಲ್ಲಿ ಇದೇ ನ್ಯಾಯಾಲಯದಲ್ಲಿ ನಾನು ಮತ್ತು ನನ್ನ ಸಹೋದರ ಸಾಕ್ಷ್ಯ ಹೇಳಿದ್ದೇವೆ ಎಂದರೆ ಸರಿ. ಸಾಕ್ಷಿಗೆ ಸಿ.ಸಿ ಸಂಃ 588/2023 ರ ಆದೇಶದ ಹಾಳೆ ಹಾಗೂ ಡಿಪೊಸಿಷನ್ ನ್ನು ತೋರಿಸಲಾಗಿ ಅವುಗಳನ್ನು ಒಪ್ಪಿದ ಮೇರೆಗೆ ಆದೇಶದ ಹಾಳೆಯನ್ನು ನಿ.ಆರ್–1 ಎಂದು, ಡಿಪೊಸಿಷನ್ ಪ್ರತಿಯನ್ನು ನಿ.ಆರ್–2 ಎಂದು, ಸಂಪತ್ ರವರ ಡಿಪೊಸಿಷನ್ ಪ್ರತಿಯನ್ನು ನಿ.ಆರ್–3 ಎಂದು, ದೂರಿನ ಪ್ರತಿಯನ್ನು ನಿ.ಆರ್–4 ಎಂದು, ಮಹಜರ್ ಪ್ರತಿಯನ್ನು ನಿ.ಆರ್–5 ಎಂದು ಗುರುತಿಸಲಾಯಿತು. ಆದರೆ ತದನಂತರದಲ್ಲಿ ಎದುರುದಾರರ ಪರ ವಕೀಲರು ಸಾಕ್ಷಿಯ ಡಿಪೊಸಿಷನ್ ನ್ನು ಮಾತ್ರ ಗುರುತಿಸಬೇಕೆಂದು ಕೋರಿಕೊಂಡ ಮೇರೆಗೆ ಸಾಕ್ಷಿಯ ಡಿಪೊಸಿಷನ್ ನ್ನು ನಿ.ಆರ್–1 ಎಂದು ಗುರುತಿಸಲಾಯಿತು. ಈಗಾಗಲೇ ನಿ.ಆರ್–1, 3 ರಿಂದ 5 ಎಂದು ಗುರುತು ಮಾಡಿರುವ ದಾಖಲೆಗಳನ್ನು ರದ್ದುಪಡಿಸಲಾಯಿತು. ಸಾಕ್ಷಿಗೆ ವಾಟ್ಸಾಪ್ ಮೆಸೇಜ್, ಫೋಟೋಸ್ ಇರುವ ದಾಖಲೆಗಳ ದೃಡೀಕೃತ ನಕಲುಗಳನ್ನು ತೋರಿಸಲಾಗಿ ಸಾಕ್ಷಿ ಅವುಗಳನ್ನು ನೋಡಿ ಫೋಟೋವನ್ನು ನೋಡಿ ಒಪ್ಪಿಕೊಂಡಿದ್ದು, ಆದರೆ ಮೆಸೇಜ್‌ಗಳನ್ನು ಎದುರುದಾರರು ಹೇಳಿದ ಹಾಗೆ ನಾನು ಮಾಡಿದ್ದೇನೆ ಅವುಗಳನ್ನು ಒಪ್ಪುವುದಿಲ್ಲ ಎಂದು ತಿಳಿಸಿದ ಮೇರೆಗೆ ಫೋಟೋಗಳನ್ನು ನಿ.ಆರ್–2 ರಿಂದ 16 ಎಂದು ಗುರುತಿಸಲಾಯಿತು. ವಾಟ್ಸಾಪ್ ಮೆಸೇಜ್‌ಗಳನ್ನು ಅವರು ಹೇಳಿದ ಹಾಗೆ ನಾನು ಮಾಡಿದ್ದೇನೆ ಆದ ಕಾರಣ ನಾನು ಒಪ್ಪುವುದಿಲ್ಲ ಎಂದು ತಿಳಿಸಿದ್ದು, ಅವುಗಳನ್ನು ನಾನೆ ಮಾಡಿದ್ದು ಒಪ್ಪಿದ ಮೇರೆಗೆ ವಾಟ್ಸಾಪ್ ಮೆಸೇಜ್‌ಗಳ ದೃಡೀಕೃತ ನಕಲುಗಳನ್ನು ನಿ.ಆರ್–17 ರಿಂದ 24 ಎಂದು ಗುರುತಿಸಲಾಯಿತು.

2. ಪ್ರಥಮವಾಗಿ ಮದುವೆಯಾಗಿ ಗಂಡನ ಮನೆಗೆ ಹೋದ ನಂತರ ಒಂದು ತಿಂಗಳಾದ ನಂತರ ನಾನು ನಮ್ಮ ಮನೆಗೆ ಬಂದಿರುತ್ತೇನೆ. ತದನಂತರ ಸ್ವಲ್ಪ ದಿನ ಇದ್ದು ದಿಃ 3.3.2022 ಕ್ಕೆ ಮತ್ತೆ ಗಂಡನ ಮನೆಗೆ ಹೋಗಿದ್ದೇನೆ ಎಂದರೆ ಸರಿ. ತದನಂತರ ಎರಡನೇ ಬಾರಿಗೆ ದಿಃ 3.4.2022 ರಂದು ಬಂದಿದ್ದೇನೆ ಎಂದರೆ ಸರಿ. ಆನಂತರ ನಾನು ಗಂಡನ ಮನೆಗೆ ಹೋಗಿರುವುದಿಲ್ಲ. ದಿಃ 15.4.2022 ರಂದು ನಾನು ನಮ್ಮ ಊರಿನಲ್ಲಿ ಇದ್ದೆ. ಗಂಡ ಹಾಗೂ ಆತನ ಮನೆಯವರು ಹಲ್ಲೆ ಮಾಡಿದ ಬಗ್ಗೆ ಪ್ರಥಮ ಬಾರಿ ನಿಮ್ಮ ಮನೆಯಲ್ಲಿ ಯಾವಾಗ ಹೇಳಿದ್ದೀರಿ ಎಂದರೆ ಸಾಕ್ಷಿ ದಿಃ 3.4.2022 ರಂದು ತಿಳಿಸಿದ್ದೇನೆ ಎಂದು ಹೇಳುತ್ತಾರೆ. ಪ್ರಥಮ ಬಾರಿಗೆ ನಾನು ಗಂಡನ ಮನೆಯಿಂದ ತವರು ಮನೆಗೆ ಬರುವಾಗ ನಮ್ಮ ತಂದೆ ತಾಯಿ ಹಾಗೂ ನಮ್ಮ ಕುಟುಂಬದವರು ಸುಮಾರು 10 ಜನ ಇದ್ದು, ನಾವು ರೈಲಿನಲ್ಲಿ ಮಂಗಳೂರಿಗೆ ಬಂದಿರುತ್ತೇವೆ. ಮಾರ್ಚ್ 3 ನೇ ತಾರೀಖಿನಂದು ನನ್ನ ಗಂಡನ ಮನೆಗೆ ವಿಮಾನದಲ್ಲಿ ಹೋಗಿರುತ್ತೇನೆ. ಆ ಫ್ಲೈಟ್ ಟಿಕೇಟ್‌ನ ಖರ್ಚುವೆಚ್ಚವನ್ನು ನನ್ನ ಗಂಡ ಭರಿಸಿರುತ್ತಾರೆ ಎಂದರೆ ಸರಿ.

3. ನಿಪಿ3 ನ್ನು ಸಾಕ್ಷಿಗೆ ತೋರಿಸಿ ಯಾಕೆ ಹಾಜರುಪಡಿಸಿದ್ದೀರಿ ಎಂದು ಕೇಳಲಾಗಿ ಸಾಕ್ಷಿ ನನ್ನ ಗಂಡನ advertisement ಇದ್ದ ಕಾರಣ ಹಾಜರುಪಡಿಸಿದ್ದೇವೆ ಎಂದು ಹೇಳುತ್ತಾರೆ. ನಾನು ಕಚ್ಚೂರುವಾಣಿ subscriber ಅಲ್ಲ ನನ್ನ ತಂದೆ ತಾಯಿ ಇರಬಹುದು, ಸಾಕ್ಷಿ ಮುಂದುವರಿದು ನನ್ನ ಮಾವ ಇದ್ದಾರೆ ಎಂದು ಹೇಳುತ್ತಾರೆ. ನಮ್ಮ ಮನೆಗೆ ಕಚ್ಚೂರುವಾಣಿ ಮಾಸಪತ್ರಿಕೆ ಬರುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ. 2018 ರ ಕಚ್ಚೂರುವಾಣಿ ನಿಮಗೆ ಎಲ್ಲಿಂದ ಸಿಕ್ಕಿದೆ ಎಂದರೆ ಸಾಕ್ಷಿ ನನ್ನ ಮಾವ ಪ್ರಶಾಂತ್ ಭಂಡಾರಿ ರವರು ತಂದುಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ನಿಪಿ3 ರಲ್ಲಿ ಕಾಣಿಸಿರುವ ಪ್ರಾಡೆಕ್ಟ್ ಗಳನ್ನು ಎದುರುದಾರರು ತಯಾರು ಮಾಡುತ್ತಾರೆ ಎಂಬ ಬಗ್ಗೆ ನಿಮ್ಮ ಹತ್ತಿರ ದಾಖಲೆ ಇದೆಯಾ ಎಂದರೆ ಸಾಕ್ಷಿ ಪ್ರೂಫ್ ಇರುವುದಿಲ್ಲ ಆದರೆ ನೋಡಿದ್ದೇನೆ ಎಂದು ಹೇಳುತ್ತಾರೆ. ನಿಪಿ3 ರಲ್ಲಿ ಕಾಣುವ ಪ್ರಾಡೆಕ್ಟ್ ಗಳನ್ನು ಅವರೇ ತಯಾರಿಸುತ್ತಾರೆ ಎಂಬ ಬಗ್ಗೆ ದಾಖಲೆ ಇದೆಯಾ ಎಂದರೆ ಇಲ್ಲ ಆದರೆ ನನ್ನ ಗಂಡ ಹೇಳಿದ್ದಾರೆ ಎಂದು ಹೇಳುತ್ತಾರೆ. ನಿಪಿ3 ರ ಹಿಂಬದಿ ಪುಟದಲ್ಲಿ ಕಾಣುವ ಪ್ರಾಡೆಕ್ಟ್ ಗಳು ಅಮೆರಿಕಾದಲ್ಲಿ ತಯಾರಾಗುವ ಪ್ರಾಡೆಕ್ಟ್ ಗಳಾಗಿದ್ದು ಅವುಗಳನ್ನು ಮಾರಾಟ ಮಾಡುವ ಸೇಲ್ಸ್ ಮಾನ್ ಆಗಿ 1 ನೇ ಎದುರುದಾರರು ಕೆಲಸ ಮಾಡುತ್ತಿದ್ದರು ಎಂದರೆ ಸರಿ.

4. ಸಾಕ್ಷಿಗೆ ತಾನು ಸಲ್ಲಿಸಿರುವ asset and liabilities ನಲ್ಲಿರುವ ಕಂಡಿಕೆ ಜೆ(2) ನ್ನು ತೋರಿಸಿ (ಎ) ನ್ನು ಓದಿ ಎದುರುದಾರರು ಮುಂಬೈನಲ್ಲಿ 65 ಲಕ್ಷ ರೂಪಾಯಿಗಳ ಫ್ಲಾಟನ್ನು ಖರೀದಿ

ಮಾಡಿದ್ದಾರೆ ಎಂದು ತಿಳಿಸಿದ್ದು ಅದರ ದಾಖಲೆಯನ್ನು ನೋಡಿದ್ದೀರಾ ಎಂದರೆ ಕೇಳಲಾಗಿ ಸಾಕ್ಷಿ ಇಲ್ಲ ಎಂದು ಉತ್ತರಿಸಿರುತ್ತಾರೆ. ಯಾವ ಆಧಾರದ ಮೇಲೆ ಅದು 1 ನೇ ಎದುರುದಾರರದ್ದು ಎಂದು ಹೇಳಿದ್ದೀರಿ ಎಂದರೆ ಸಾಕ್ಷಿ ಅದನ್ನು 1 ನೇ ಎದುರುದಾರರೇ ಹೇಳಿದ್ದರು ಎಂದು ಹೇಳುತ್ತಾರೆ. ಆ ಫ್ಲಾಟ್ ನ ದಾಖಲೆಗಳನ್ನು ನೀವಾಗಲಿ ಅಥವಾ ನಿಮ್ಮ ಮನೆಯವರಾಗಲಿ ಮುಂಬೈನಲ್ಲಿ ಪಡೆದುಕೊಳ್ಳಲು ಪ್ರಯತ್ನಿಸಿದ್ದೀರಾ ಎಂದರೆ ಇಲ್ಲ. 1 ನೇ ಎದುರುದಾರರ ಹತ್ತಿರ ನಾನು ಮೇಲೆ ತಿಳಿಸಿದ ಯಾವುದೇ ಅಪಾರ್ಟ್ ಮೆಂಟ್ ಇಲ್ಲ ಎಂದರೆ ಸಾಕ್ಷಿ ಇದೆ, 1 ನೇ ಎದುರುದಾರರೇ ಹೇಳಿದ್ದು ಎಂದು ಹೇಳುತ್ತಾರೆ. ಸಾಕ್ಷಿಗೆ ತಾನು ಹಾಜರುಪಡಿಸಿರುವ asset and liabilities ನಲ್ಲಿರುವ ಕಂಡಿಕೆ ಜೆ(2) ನ್ನು ತೋರಿಸಿ (ಬಿ) ನ್ನು ತೋರಿಸಿ ಅದರಲ್ಲಿ 1 ನೇ ಎದುರುದಾರರು 8 ಬೈಕುಗಳನ್ನು ಹೊಂದಿದ್ದಾರೆ ಎಂದು ತಿಳಿಸಿದ್ದು ಅವುಗಳ ದಾಖಲೆಯನ್ನು ನೋಡಿದ್ದೀರಾ, 'ಬಿ' ಎಕ್ಸ್-ಟ್ರಾಕ್ಟ್ ನ್ನು ತೆಗೆಸಿದ್ದೀರಾ ಎಂದರೆ ಸಾಕ್ಷಿ ಎರಡು ಬೈಕಿಗಳಿಗೆ ಸಂಬಂಧಪಟ್ಟಂತೆ ತೆಗೆದುಕೊಂಡಿದ್ದೇನೆ, ಉಳಿದ ಬೈಕುಗಳ ನಂಬರ್ ನಮ್ಮ ಹತ್ತಿರ ಇಲ್ಲ ಎಂದು ಹೇಳುತ್ತಾರೆ. 1 ನೇ ಎದುರುದಾರರ ಹತ್ತಿರ ಯಾವತ್ತೂ 8 ಬೈಕು ಇರಲಿಲ್ಲ, 2 ಬೈಕುಗಳು ಮಾತ್ರ ಇದ್ದವು ಎಂದರೆ ಸಾಕ್ಷಿ 1 ನೇ ಎದುರುದಾರರು 8 ಬೈಕು ಇವೆ ಎಂದು ಹೇಳಿದ್ದರು ಎಂದು ಹೇಳುತ್ತಾರೆ. ಆ 2 ಬೈಕುಗಳು ಸಹ ಈಗ 1 ನೇ ಎದುರುದಾರರ ಹತ್ತಿರ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ಎರಡು ಬೈಕುಗಳ ಫೋಟೋಗಳನ್ನು ಹಾಜರುಪಡಿಸಿರುವುದಲ್ಲದೇ 'ಬಿ' ಎಕ್ಸ್-ಟ್ರಾಕ್ಟ್ ನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಆನ್ ಲೈನ್ ನಲ್ಲಿ ಒಂದು ಅಪ್ಲಿಕೇಶನ್ ಇದ್ದು ಅದರಲ್ಲಿ ನಂಬರನ್ನು ಹಾಕಿದರೆ ಅದರ ಓನರ್ ಯಾರು ಎಂದು ಗೊತ್ತಾಗುತ್ತದೆ, ನಾವು ಅದನ್ನು ತೆಗೆದು ಹಾಜರುಪಡಿಸಿದ್ದೇವೆ ಎಂದು ಹೇಳುತ್ತಾರೆ.

**5.** 1 ನೇ ಎದುರುದಾರರಿಗೆ ಬೈಕ್ ರೇಸ್ ಪ್ಯಾಶನ್ ಎಂದರೆ ಸರಿ. 1 ನೇ ಎದುರುದಾರರು ಮದ್ರಾಸ್ ಮತ್ತು ಇತರೆ ಕಡೆ ಹೋಗಿ ರೇಸಿಂಗ್ ಟ್ರಾಕ್‌ನಲ್ಲಿ ಭಾಗವಹಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. 1 ನೇ ಎದುರುದಾರರು ಖರೀದಿ ಮಾಡಿರುವ ಎರಡು ಬೈಕ್ ಗಳು ಉಪಯೋಗ ಮಾಡಿದ ಬೈಕುಗಳು ಎಂದರೆ ಗೊತ್ತಿಲ್ಲ. 1 ನೇ ಎದುರುದಾರರ ಹತ್ತಿರ ಫಾರ್ಚುನರ್ ಕಾರ್ ಇದೆ ಎಂದು ತಿಳಿಸಿದ್ದು, ಅದರ ದಾಖಲೆಗಳನ್ನು ಕಂಪ್ಯೂಟರ್ ಮೂಲಕ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ನಂಬರ್ ಸಿಕ್ಕಿರುವುದಿಲ್ಲ ಎಂದು ಹೇಳುತ್ತಾರೆ. ನೀವಾಗಲಿ ನಿಮ್ಮ ಮನೆಯವರಾಗಲಿ ಬಾಂಬೆಗೆ ಹೋಗಿ ಎದುರುದಾರರ ಎರಡು ಬೈಕು ಹಾಗೂ ಕಾರಿನ ನಂಬರನ್ನು ಪಡೆದುಕೊಂಡು 'ಬಿ' ಎಕ್ಸ್-ಟ್ರಾಕ್ಟ್ ನ್ನು ಪಡೆದುಕೊಳ್ಳಲು ಪ್ರಯತ್ನ ಮಾಡಿದ್ದೀರಾ ಎಂದರೆ ಹೌದು. ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ

ಪ್ರಯತ್ನಪಟ್ಟಿದ್ದೇವೆ, ಆದರೆ ಸಿಕ್ಕಿರುವುದಿಲ್ಲ ಎಂದು ಹೇಳುತ್ತಾರೆ. ಅವರ ಹೆಸರಿನಲ್ಲಿ ಬೈಕು ಮತ್ತು ಕಾರು ಇಲ್ಲದ ಕಾರಣ ನಾವು ಪ್ರಯತ್ನ ಮಾಡಿದ್ದೇವೆ, ಸಿಕ್ಕಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ಯಾವತ್ತೂ ಸಹ ಕಾರನ್ನೆ ಇಟ್ಟುಕೊಂಡಿರುವುದಿಲ್ಲ ಆದರೂ ಸಹ ಸುಳ್ಳು ಹೇಳಿದ್ದೇವೆ ಎಂದರೆ ಸರಿಯಲ್ಲ, ಅವರ ಹತ್ತಿರ ಇದೆ.

6. ಸಾಕ್ಷಿಗೆ ತಾನು ಸಲ್ಲಿಸಿರುವ asset and liabilities ನಲ್ಲಿರುವ ಕಂಡಿಕೆ ಜೆ(2) ನ್ನು ತೋರಿಸಿ (ಸಿ) ನಯಲ್ಲಿ ತಿಳಿಸಿರುವ Vikram Aquaprime aquatics imports and exports ಅದರ ಸೋರ್ಸ್ ಎಲ್ಲಿಂದ ಸಿಕ್ಕಿದೆ ಎಂದರೆ ಸಾಕ್ಷಿ ಸೋಶಿಯಲ್ ಮಿಡಿಯಾದಿಂದ ಸಿಕ್ಕಿದೆ ಎಂದು ಹೇಳುತ್ತಾರೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಹೌದು. ಸಾಕ್ಷಿಗೆ ನಿಪಿ1 ನ್ನು ತೋರಿಸಿ ಅದನ್ನೆ asset and liabilities ನಲ್ಲಿ ಹೇಳಿದ್ದೀರಾ ಎಂದರೆ ಹೌದು ಎಂದು ಉತ್ತರಿಸಿರುತ್ತಾರೆ. 1 ನೇ ಎದುರುದಾರರು ಮನೆಯಲ್ಲಿ ಫಿಶ್ ಅಕ್ವೇರಿಯಂ ನ್ನು ಇಟ್ಟುಕೊಳ್ಳುವ ಹವ್ಯಾಸ ಇಟ್ಟುಕೊಂಡಿದ್ದಾರೆ ಎಂದರೆ ಸಾಕ್ಷಿ ನಾನು ಆ ಮನೆಯಲ್ಲಿ ಇರುವವರೆಗೂ ಅಕ್ವೇರಿಯಂ ಇರಲಿಲ್ಲ ಎಂದು ಹೇಳುತ್ತಾರೆ. ಫಿಶ್ ಅಕ್ವೇರಿಯಂ ವ್ಯವಹಾರವನ್ನು 1 ನೇ ಎದುರುದಾರರು ಯಾವಾ ಪ್ರಾರಂಭಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಎದುರುದಾರರು ಸಿಗ್ಮಾ ಕಂಪನಿಯಿಂದ ಕೆಲಸವನ್ನು ಬಿಟ್ಟ ನಂತರ ಫಿಶ್ ಅಕ್ವೇರಿಯಂ ಗೆ ಸಂಬಂಧಪಟ್ಟ ವ್ಯವಹಾರವನ್ನು ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ. 1 ನೇ ಎದುರುದಾರರ ಚಿಕ್ಕ ವ್ಯವಹಾರವನ್ನು ದೊಡ್ಡದಾಗಿ ತೋರಿಸಲು asset and liabilities ನಲ್ಲಿ imports and exports ಎಂದು ತೋರಿಸಿದ್ದೇನೆ ಎಂದರೆ ಸರಿಯಲ್ಲ.

7. ಸಾಕ್ಷಿಗೆ ತಾನು ಸಲ್ಲಿಸಿರುವ asset and liabilities ನಲ್ಲಿರುವ ಕಂಡಿಕೆ ಜೆ(2) ನ್ನು ತೋರಿಸಿ (ಡಿ) ಯಲ್ಲಿ ತಿಳಿಸಿರುವ Jim equipments product factory ಯಾರ ಹೆಸರಿನಲ್ಲಿದೆ, ಆ factory ಎಲ್ಲಿದೆ, ಅದರ Trade license, manufacturing license ಗಳನ್ನು ಪಡೆದುಕೊಳ್ಳಲು ನೀವಾಗಲಿ ನಿಮ್ಮ ಕುಟುಂಬದವರಾಗಲಿ ಪ್ರಯತ್ನ ಮಾಡಿದ್ದೀರಾ ಎಂದರೆ ಹೌದು, ಆದರೆ ಅವುಗಳು ಸಿಕ್ಕಿರುವುದಿಲ್ಲ. ನಾನು ಮೇಲೆ ಹೇಳಿದ ರೀತಿಯಲ್ಲಿ 1 ನೇ ಎದುರುದಾರರ ಹತ್ತಿರ ಆ ರೀತಿ factory ಇರಲಿಲ್ಲ, ಆ ರೀತಿಯ factory ಅಲ್ಲಿ 1 ನೇ ಎದುರುದಾರರು ಕೆಲಸಕ್ಕೆ ಇರಲಿಲ್ಲ ಎಂದರೆ ಸಾಕ್ಷಿ ಅದು ಅವರ ಸ್ವಂತದ್ದು ಎಂದು ಹೇಳುತ್ತಾರೆ.

8. ಸಾಕ್ಷಿಗೆ ತಾನು ಸಲ್ಲಿಸಿರುವ asset and liabilities  ನಲ್ಲಿರುವ ಕಂಡಿಕೆ ಜೆ(2) ನ್ನು ತೋರಿಸಿ (ಡಿ) Non agricultural family properties ಎಂದು ಬರೆದಿರುವುದನ್ನು ತೋರಿಸಿ ಅವುಗಳ ಪಹಣಿ ಪತ್ರಿಕೆಗಳನ್ನು ತೆಗೆಸಿದ್ದೀರಾ ಎಂದು ಕೇಳಲಾಗಿ ಸಾಕ್ಷಿ ತೆಗೆಸಿದ್ದೇವೆ ಎಂದು ಹೇಳುತ್ತಾರೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ಮೂಡಬಿದ್ರೆಯಲ್ಲಿ 1 ನೇ ಎದುರುದಾರರಿಗೆ ನಾನು ಹೇಳಿದ ರೀತಿಯಲ್ಲಿ ಯಾವುದೇ ಆಸ್ತಿ ಇಲ್ಲ ಎಂದರೆ ಸಾಕ್ಷಿ 1 ನೇ ಎದುರುದಾರರ ತಂದೆಯದ್ದು ಎಂದು ಹೇಳುತ್ತಾರೆ. 1 ನೇ ಎದುರುದಾರರು ಮುಂಬೈನಲ್ಲಿರುವ ಫ್ಲಾಟ್, 8 ಬೈಕು ಹಾಗೂ ಫಾರ್ಚುನಾರ್ ಕಾರು, Jim equipments factory ಇವುಗಳಿಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ಹಾಜರುಪಡಿಸಿದರೆ ಅವುಗಳನ್ನು ಅರ್ಜಿದಾರರಿಗೆ ಕೊಡುವುದಾಗಿ ಅನುಭವ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಮದುವೆಯಾಗುವಾಗ ನಮ್ಮ ಹತ್ತಿರ ಈ ಮೇಲೆ ಹೇಳಿದ ವಸ್ತುಗಳು ಇವೆ ಎಂದು ಹೇಳಿರುತ್ತಾರೆ, ಅಲ್ಲದೆ ಮದುವೆಯಾದ ನಂತರ ನನ್ನನ್ನು ಆ ಜಿಮ್ ಗೆ ಸಹ ಕರೆದುಕೊಂಡು ಹೋಗಿರುತ್ತಾರೆ, ಬೈಕುಗಳನ್ನು ಸಹ ತೋರಿಸಿರುತ್ತಾರೆ ಎಂದು ಹೇಳುತ್ತಾರೆ. ಹೀಗೆ ಮೇಲೆ ಹೇಳಿದ್ದನ್ನು ಊಹೆ ಮಾಡಿಕೊಂಡು ಹೇಳಿದ್ದೇನೆ ಎಂದರೆ ಸರಿಯಲ್ಲ.

9. ನಾನು ಈಗ Rizlovia ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನನ್ನ ಸಂಬಳವನ್ನು ನನ್ನ ಕೆನರಾ ಬ್ಯಾಂಕ್ ಖಾತೆ, ವೇಣೂರು ಬ್ರಾಂಚಿಗೆ ವರ್ಗಾವಣೆ ಮಾಡುತ್ತಾರೆ. ಎಷ್ಟು ಸಂಬಳ ಕೊಡುತ್ತಾರೆ ಎಂದರೆ ಸಾಕ್ಷಿ ಮೊದಲು ಇದ್ದೆ, ಆಗ ನನಗೆ ರೂ. 15000/- ಸಂಬಳ ಕೊಡುತ್ತಿದ್ದರು, ಈಗ ನಾನು ಕೆಲಸದಲ್ಲಿ ಇಲ್ಲ ಎಂದು ಹೇಳುತ್ತಾರೆ. ನಿಮ್ಮ ಪಾಸ್ ಬುಕ್ ನ್ನು ಹಾಜರುಪಡಿಸಬಹುದಾ ಎಂದರೆ ಹೌದು. ನೀವು ಯಾವಾಗ ಕೆಲಸ ಬಿಟ್ಟದ್ದೀರಿ ಎಂದರೆ ಸಾಕ್ಷಿ ಏಪ್ರಿಲ್ 2025 ರಲ್ಲಿ ಕೆಲಸ ಬಿಟ್ಟಿದ್ದೇನೆ ಎಂದು ಹೇಳುತ್ತಾರೆ. ನೀವು ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದಕ್ಕೆ ದಾಖಲೆಗಳು ಇವೆಯಾ ಎಂದರೆ ಹೌದು. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದಾ ಎಂದರೆ ಹೌದು. ನಾನು ಹೇಳಿದ ರೀತಿಯಲ್ಲಿ 1 ನೇ ಎದುರುದಾರರ ಹತ್ತಿರ ಅಷ್ಟು ಆಧಾಯ ಇಲ್ಲ ಎಂದರೆ ಸರಿಯಲ್ಲ. ಕೆಲಸದಲ್ಲಿದ್ದೇನೆ ಎಂದು ಹೇಳಿ ಸಿ.ಸಿ ಸಂಃ 588/2023 ರಲ್ಲಿ ಹೇಳಿದ ನಂತರ ಇಲ್ಲಿ ಒಪ್ಪಿಕೊಂಡರೆ ತೊಂದರೆಯಾಗುತ್ತದೆ ಎಂದು ಕೆಲಸಕ್ಕೆ ರಾಜಿನಾಮೆ ಕೊಟ್ಟಿದ್ದೇನೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾಟ್ಸಾಪ್ ಮೆಸೇಜ್‌ಗಳನ್ನು  ಸಿ.ಸಿ ಸಂಃ 588/2023 ರಲ್ಲಿ ಮಾಡಿದ್ದೇನೆ ಎಂದು ಹೇಳಿದ ನಂತರ ಅಲ್ಲಿ ತೊಂದರೆಯಾಗುತ್ತದೆ ಎಂದು ಹೇಳಿ ಈ ಪ್ರಕರಣದಲ್ಲಿ 1 ನೇ ಎದುರುದಾರರ ಹೇಳಿದ

ರೀತಿಯಲ್ಲಿ ಮಾಡಿದ್ದೇನೆ ಎಂದು ಭಿನ್ನವಾಗಿ ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಅರ್ಜಿಯಲ್ಲಿ ಎದುರುದಾರರ ವಿರುದ್ಧ ಮಾಡಿರುವ ಆಪಾದನೆಗಳು ಅಂದರೆ ವರದಕ್ಷಿಣೆ ಕಿರುಕುಳ, ಹಲ್ಲೆ, 1 ನೇ ಎದುರುದಾರರಿಗೆ ಅಕ್ರಮ ಸಂಬಂಧ ಎಲ್ಲವೂ ಸುಳ್ಳು ಎಂದರೆ ಸರಿಯಲ್ಲ, ನನ್ನ ಹತ್ತಿರ ದಾಖಲೆ ಇದೆ. 1 ನೇ ಎದುರುದಾರರು ನನಗೆ ಯು.ಕೆ ಗೆ ಹೋಗಲು ದೊಡ್ಡ ಮೊತ್ತದ ಹಣವನ್ನು ಕೊಡದ ಕಾರಣ ಈ ಎಲ್ಲಾ ಆಪಾದನೆಗಳನ್ನು ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
(ಸಾ.ಓ.ಹೇ.ಕೇ.ಸ.ಇ.ಎ.ಒ) ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ